ಶ್ರೀ ಕೆ. ಎಚ್. ಮುದಿಯಪ್ಪನವರು.—ಈಗ ಆ ಜಮೀನುಯಾರ ಸುಪರ್ದಿನಲ್ಲಿದೆ ?

ಶ್ರೀ ಆರ್. ಚೆನ್ನಿಗರಾಮಯ್ಯನವರು. ಮುನಿಸಿಪಾಲಿಟಿಯವರ ಸುಪರ್ದಿನಲ್ಲಿದೆ.

ಶ್ರೀ ಕೆ. ಎಚ್. ಮುದಿಯಪ್ಪನವರು.—ಈಗಾಗಲೇ ಆ ಜಮೀನಿನಲ್ಲಿ ವಾಸದ ಮನೆಗಳನ್ನು ಕಟ್ಟಿಕೊಂಡು ಕೆಲವರು ವಾಸಮಾಡುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಶ್ರೀ ಆರ್. ಚೆನ್ನಿಗರಾಮಯ್ಯನವರು.—ಬಂದಿದೆ. ಕೆಲವರು ಹಾಗೆ ಅಕ್ರಮ ನಡೆವಳಿಕೆಗಳು ನಡೆಸಿದ್ದಾರೆ. ಅಪ್ಪಣೆಯಿಲ್ಲದೆ ಹಿಂದೆ ಆಲ್ಲಿ ಒಂದಾವರ್ತಿ ಪ್ಲೇಗ್ ಗಲಾಟೆ ಆಗಿದ್ದ ಕಾಲದಲ್ಲಿ ಆ ರೀತಿ ಅಲ್ಲಿ ಮನೆಗಳನ್ನು ಕಟ್ಟಿಕೊಂಡಿದ್ದುದು ಅವು ಹಾಗೇ ಇವೆ.

ಶ್ರೀ ಕೆ. ಎಚ್. ಮುದಿಯಪ್ಪನವರು.—ಆ ಸ್ಥಳ ಬಹಳ ಬೆರೆಯುಳ್ಳದ್ದು. ಅದನ್ನು ಬಿಡುವುದು ಎಂಬ ಉದ್ದೇಶದಿಂದ ಕೆಲವರು ಹಾಗೆ ಅಲ್ಲಿ ಇನ್ನೂ ಆ ನೆಪದ ಮೇಲೆಯೇ ಅಲ್ಲಿ ವಾಸಮಾಡುತ್ತಿದ್ದಾರೆಂಬುದು ಸರ್ಕಾರಕ್ಕೆ ಗೊತ್ತಿದೆಯೇ ?

ಶ್ರೀ ಆರ್. ಚೆನ್ನಿಗರಾಮಯ್ಯನವರು.—ಇಲ್ಲ.

ಶ್ರೀ ಕೆ. ಎಚ್. ಮುದಿಯಪ್ಪನವರು.— ಅವರು ಸರ್ಕಾರಕ್ಕೆ ಹಾಕಿಕೊಂಡಿರತಕ್ಕ ಅರ್ಜಿಯಲ್ಲಿ ಆ ಸ್ಥಳವನ್ನು ಯಾವ ಉದ್ದೇಶಕ್ಕೋಸ್ಕರ ಬೇಕೆಂದು ಕೇಳಿದ್ದಾರೆ ?

ಶ್ರೀ ಆರ್. ಚೆನ್ನಿಗರಾಮಯ್ಯನವರು.—ನಾನಾಗಲೇ ತಿಳಿಸಿದಂತೆ 2-3 ಬೇರೆಬೇರೆ ಅಭಿಪ್ರಾಯಗಳನ್ನು ನಮ್ಮೂದ್ದು ಮಾಡಿದ್ದಾರೆ. ಒಂದೊಂದು ಅರ್ಜಿಯಲ್ಲಿ ಒಂದೊಂದು ಕಾರಣ ಹಾಕಿದ್ದಾರೆ. ಮೊದಲನೆಯ ಸಾರ್ತಿ ಅರ್ಜಿ ಹಾಕಿದ್ದರಲ್ಲಿ ಸಿನೀಮಾ ಮಂದಿರಕ್ಕೆ ಬೇಕೆಂದೂ, ಎರಡನೆಯ ಸಾರ್ತಿ ಹಾಕಿಕೊಂಡಿರುವುದರಲ್ಲಿ ನೇಯ್ಗೆ ಕಾರ್ಖಾನೆಗಾಗಿ ಬೇಕೆಂದೂ, ಮತ್ತೊಂದರಲ್ಲಿ ವಾಸದ ಮನೆ ಕಟ್ಟಿಕೊಳ್ಳಲು ಬೇಕಾಗಿರುತ್ತೆಂದೂ—ಹೀಗೆಲ್ಲಾ ತರಹಾವರಿಯಾಗಿ ಕೇಳಿದ್ದಾರೆ. ಅವರು ಬರೆಮಕೊಂಡಿರುವ ಅರ್ಜಿಗಳೆಲ್ಲ ಈಗ ನನ್ನ ಬಳಿಯಲ್ಲೇ ಇವೆ. ಒಂದು ಅರ್ಜಿಯಲ್ಲಿ ಮಾನ್ಯ ಮುಖ್ಯಮಂತ್ರಿಗಳು ಅಸ್ತಿಭಾರ ಹಾಕಲು ಒಪ್ಪಿಕೊಂಡಿದ್ದಾರೆಂದೂ, ಮಾನ್ಯ ಆರ್ಥಿಕ ಸಚಿವರು 5,000 ರೂಪಾಯಿಗಳನ್ನು ಕೊಡಲು ಒಪ್ಪಿದ್ದಾರೆ ಎಂದೂ ಇತ್ಯಾದಿ ಎಲ್ಲಾ ಬರೆದಿದ್ದಾರೆ. ಅಲ್ಲಿ ನಡೆಯಬೇಕಾದ ಕಾರ್ಯಕ್ರಮಗಳು ಇನ್ನೂ ಯಾವುವೂ ನಡೆದಿಲ್ಲ.

ಶ್ರೀ ಕೆ. ಎಚ್. ಮುದಿಯಪ್ಪನವರು.—ಜಮೀನು ಕೊಡಬೇಕೆಂದು ಹಣ ಡಿಪಾಜಿಟ್ ಮಾಡಿರುವುದು ನಿಜವೆ ?

ಶ್ರೀ ಆರ್. ಚೆನ್ನಿಗರಾಮಯ್ಯನವರು.—ಆ ಬಗ್ಗೆ ವರದಿ ಬಂದಿಲ್ಲ.

ಶ್ರೀ ಕೆ. ಎಚ್. ಮುದಿಯಪ್ಪನವರು.—ಅಲ್ಲಿನ ಕೆಲಸ ಮುಂದುವರಿಯುವುದಕ್ಕೆ ಮುಂಚೆ ಮುಖ್ಯ ಮಂತ್ರಿಗಳು ಹೇಳಿದರೆಂದು ಹಣ ಡಿಪಾಜಿಟ್ ಮಾಡಿಲ್ಲವೆ ?

Mr. SPEAKER.—That question does not arise.

ಶ್ರೀ ಕೆ. ಎಚ್. ಮುದಿಯಪ್ಪನವರು.—1945ರಲ್ಲಿ ಹಣ ಡಿಪಾಜಿಟ್ ಮಾಡಿರುವುದರಿಂದ ಕ್ರಿಮ್ ಮಾಡಲು ಅವಕಾಶ ಕೊಡುತ್ತೀರಾ ? ಒಂದು ವೇಳೆ ಕೊಡದೇ ಹೋದರೆ ಕಟ್ಟಿರುವ ಹಣ ವಾಪಸು ಮಾಡಲಾಗುವುದೆ ? ಆ ಬಗ್ಗೆ ತೀರ್ಮಾನವಾಗಿದೆಯೆ ?

ಶ್ರೀ ಆರ್. ಚೆನ್ನಿಗರಾಮಯ್ಯನವರು.—ಅಲ್ಲಿ ಪಕ್ಷಗಳ ಬಲ ಹೆಚ್ಚಾಗಿರುವುದರಿಂದ ಆ ಸ್ಥಳವನ್ನು ಅಜಮಾಯಿಷಿ ಮಾಡಿ ಎಲ್ಲ ವಿಷಯಗಳನ್ನೂ ಪರಿಶೀಲಿಸಿ ಕೊನೆಯದಾಗಿ ತೀರ್ಮಾನ ಮಾಡಿದೆ.

Mr. SPEAKER.—Next question.

Preparation and Printing of Electoral Rolls connected with next General Elections.

*Q.—71. Sri D. H. CHANDRASEKHARAIYA (Chitaldrug District—General).—

Will the Government be pleased to state :—

the progress that has been made in the preparation and printing of Electoral Rolls in connection with the General Elections to be held under the new Constitution of India ?

A.—Sri K. T. BHASHYAM (Minister for Law and Labour).—The preparation of the manuscript electoral rolls for the House of the People and State Legislative Assembly has been completed. Action is being taken to get them printed.

Sri D. H. CHANDRASEKHARAIYA.—When is the printing likely to be finished ?

Sri K. T. BHASHYAM.—We are expecting to finish it in about three months.

Sri D. H. CHANDRASEKHARAIYA.—Will the rolls be published after the printing is over ?

Sri K. T. BHASHYAM.—Yes, they will be published.

Sri M. GOVINDA REDDY (Chitaldrug District—General).—Are these manuscript electoral rolls pooled in from all districts ?

Sri K. T. BHASHYAM.—The manuscript rolls have been prepared in respect of each village.

Sri M. GOVINDA REDDY.—Have they been distributed for printing or are they given to one press for printing?

Sri K. T. BHASHYAM.—They are given for printing Presses all over the State so that we may get them quickly printed.

Sri M. GOVINDA REDDY.—Are they distributed for printing ?

Sri K. T. BHASHYAM.—Yes, they are in the process of distribution.

Janab MOHAMED VALIULLA (Kolar – Muslim).—When do you expect the elections to take place?

Sri K. T. BHASHYAM.—We expect the elections to come off somewhere in March 1951. So, we are getting the rolls ready.

Janab MOHAMED VALIULLA.—The Hon'ble Minister said that some progress has been made in printing the electoral rolls. Now we know that elections have been postponed to October 1951.

Sri K. T. BHASHYAM.—How does it matter? We shall have the electoral rolls ready.

Janab MOHAMED VALIULLA.—I want to know whether the electoral rolls prepared for the elections expected to be held in March 1951 will be up to date for the elections in October 1951?

Sri K. T. BHASHYAM.—That depends upon the Chief Election Commissioner. Now we are preparing as on 1st March 1951. By reason of the postponement of the elections if they want the electoral rolls to be brought up-to-date, we will find out the additional names and we will add a supplementary roll.

Janab MOHAMED VALIULLA.—Does it follow that it will be given for printing at a later hour and so the printing will be postponed?

Sri K. T. BHASHYAM.—No. We do not think of postponing.

Sri H. SIDDAVEERAPPA (Chitaldrug District—General).—Have Government called for any tenders for this printing work?

Sri K. T. BHASHYAM.—We have asked the Printers' Association to take charge of the printing and they have, on behalf of all the Printers in the State, agreed.

Sri H. SIDDAVEERAPPA.—May I know if Government have estimated the cost of this printing work?

Sri K. T. BHASHYAM.—The cost would be Rs. 9 per page for 1,000 copies.

Sri H. SIDDAVEERAPPA.—Are the Government aware of the rates given for printing the electoral rools either in Bombay or Madras?

Sri K. T. BHASHYAM.—Yes, we have compared with the rates in Bombay and Madras and Rs. 9 is found to be very reasonable here.

Sri H. SIDDAVEERAPPA.—May I know the rate in Bombay?

Sri K. T. BHASHYAM.—I want notice for that.

ಶ್ರೀ ಎಸ್. ರಂಗರಾಮಯ್ಯನವರು (ಮೈಸೂರು ಜಿಲ್ಲೆ).—ಮುದ್ರಣಕ್ಕೆ ಕೊಟ್ಟಿರುವ ಪೊಬಲಗಿನಲ್ಲಿ ಕಾಗದದ ಖರ್ಚು ಸೇರಿದೆಯೆ ಅಥವಾ ಬರಿ ಮುದ್ರಣದ ಖರ್ಚು ಮಾತ್ರವೊ?

ಶ್ರೀ ಕೆ. ಟಿ. ಭಾಷ್ಯಂರವರು.—ಬರಿ ಮುದ್ರಣ ಕ್ಕಾಗಿ 9 ರೂಪಾಯಿ ಆಗಿದೆ.

ಶ್ರೀ ಎಸ್. ರಂಗರಾಮಯ್ಯನವರು.—ಕಾಗದಕ್ಕೆ ಎಷ್ಟು ಖರ್ಚಾಗುತ್ತದೆ?

ಶ್ರೀ ಕೆ. ಟಿ. ಭಾಷ್ಯಂರವರು.—ಕಾಗದವನ್ನು ಭದ್ರಾವತಿಯಿಂದ ಒದಗಿಸುತ್ತೇವೆ.

ಶ್ರೀ ಎಸ್. ರಂಗರಾಮಯ್ಯನವರು.—ಎಷ್ಟು ಕಾಗದ ಬೇಕಾಗುತ್ತದೆ?

ಶ್ರೀ ಕೆ. ಟಿ. ಭಾಷ್ಯಂರವರು.—ಲೆಕ್ಕಾಚಾರ ಮಾಡ ಬೇಕು.

ಶ್ರೀ ಎಸ್. ರಂಗರಾಮಯ್ಯನವರು.—ಓಟರುಗಳ ಪಟ್ಟಿ ರಿಪೈಸ್ ಆಗಿದೆಯೆ?

ಶ್ರೀ ಕೆ. ಟಿ. ಭಾಷ್ಯಂರವರು.—1-3-1950ರ ವರೆಗೆ ಯಾವ ರೀತಿ ಇತ್ತೋ ಆ ರೀತಿ ಮಾಡಿದೆ.

ಶ್ರೀ ಎಸ್. ರಂಗರಾಮಯ್ಯನವರು.—ಈಚೆಗೆ ಯಾವುದಾದರೂ ಕೈಬಿಟ್ಟಿದ್ದು ಅಪೆಕ್ಷ ಏನಾದರೂ ಬಂದಿದ್ದರೆ ಅದನ್ನು ಸೇರಿಸಿದೆಯೆ?

ಶ್ರೀ ಕೆ. ಟಿ. ಭಾಷ್ಯಂರವರು.—ಈಗ ಬರುವುದಿಲ್ಲ. ಮುದ್ರಣವಾದ ಮೇಲೆ ಯಾವುದಾದರೂ ಹೆಸರು ಬಿಟ್ಟು ಹೋಗಿದ್ದರೆ ಅದನ್ನು ಸೇರಿಸುತ್ತೇವೆ.

ಶ್ರೀ ಎಸ್. ರಂಗರಾಮಯ್ಯನವರು.—ಈಗ ತಯಾರಾಗಿರುವ ಪಟ್ಟಿಯನ್ನು ಪರಿಶೀಲಿಸಲು ಜನರಿಗೆ ಅವಕಾಶ ಕೊಟ್ಟಿದ್ದೀರಾ?

ಶ್ರೀ ಕೆ. ಟಿ. ಭಾಷ್ಯಂರವರು.—ಈಗ ಎಲ್ಲರಿಗೂ ತಿಳಿಸಿ ಕೈಲಾದಮಟ್ಟಿಗೂ ಎಲ್ಲರ ಹೆಸರನ್ನೂ ಸೇರಿಸಿದ್ದೇವೆ. ಒಂದು ವೇಳೆ ಕೈಬಿಟ್ಟಿದ್ದರೆ ಪಟ್ಟಿಯು ಪ್ರಕಟವಾದ ಮೇಲೆ ಯಾರಾದರೂ ಹೇಳಿದರೆ ಸೇರಿಸುತ್ತೇವೆ.

ಶ್ರೀ ಎಸ್. ರಂಗರಾಮಯ್ಯನವರು.—ಇದಕ್ಕೆ 14 ಮೈಲು ಉದ್ದ ಕಾಗದ ಬೇಕೆಂದು ಹೇಳತ್ತಿದ್ದುದು ನಿಜವೆ?

(ಉತ್ತರವಿಲ್ಲ.)

ಶ್ರೀ ಎಂ. ಮಾದಯ್ಯನವರು (ಮೈಸೂರು ಜಿಲ್ಲೆ—ನಿಮ್ಮ ಪಂಗಡ).—ಇಷ್ಟು ದಿವಸಗಳಲ್ಲೇ ಮುದ್ರಣವಾಗಬೇಕೆಂದು ಒಪ್ಪಂದವೇನಾದರೂ ಇದೆಯೇ?

ಶ್ರೀ ಕೆ. ಟಿ. ಭಾಷ್ಯಂರವರು.—ಏನೂ ಇಲ್ಲ. We expect that as far as possible within three months we will complete it.